ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	323
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	:	14/09/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ಉತ್ತರ ತಾಲೂಕು ಜಾಲ ಹೋಬಳಿ ಹುಣಸಮಾರನಹಳ್ಳಿ ಪುರಸಭೆ ಯಾವಾಗ ಅಧಿಸೂಚನೆ ಹೊರಡಿಸಲಾಗಿದೆ (ವಿವರ ನೀಡುವುದು);	ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 154 ಎಂಎಲ್‌ಆರ್ 2020; ದಿನಾಂಕ:26/03/2021 ರನ್ವಯ ಹುಣಸಮಾರನಹಳ್ಳಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ (ಪ್ರತಿ ಲಗತ್ತಿಸಿದೆ)
(ಆ)	ಸದರಿ ಪುರಸಭೆ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳು ಒಳಗೊಂಡಿರುತ್ತವೆ;	ಹುಣಸಮಾರನಹಳ್ಳಿ ಪುರಸಭೆಗೆ ಒಳಪಡುವ ಗ್ರಾಮಗಳು: ಹುಣಸಮಾರನಹಳ್ಳಿ, ಮಜರೆ ಗ್ರಾಮಗಳು, ಭಾರತಿನಗರ, ಕೋಡಗಲಹಟ್ಟಿ, ಸೊಣ್ಣಪ್ಪನಹಳ್ಳಿ, ಕಾಡಿಗಾನಹಳ್ಳಿ, ಬಿಲ್ಲಮಾರನಹಳ್ಳಿ.
(ಇ)	ಸದರಿ ಪುರಸಭೆ ವ್ಯಾಪ್ತಿಯ ಕಾಡಿಗಾನಹಳ್ಳಿ ಗ್ರಾಮದ ಬೃಂದಾವನ ಬಡಾವಣೆಯಲ್ಲಿ ಇದುವರೆವಿಗೂ ಪುರಸಭೆ ವ್ಯಾಪ್ತಿಯಿಂದ ಅತ್ಯಾವಶ್ಯಕವಾಗಿರುವ ನೀರಿನ ಸೌಲಭ್ಯ ರಸ್ತೆ, ಚರಂಡಿ ಹಾಗೂ ಇನ್ನಿತರ ಯಾವುದೇ ಮೂಲ ಸೌಲಭ್ಯಗಳನ್ನು ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಹುಣಸಮಾರನಹಳ್ಳಿ ಪುರಸಭೆಯನ್ನು ದಿನಾಕ:26/03/2021 ರಂದು ಗ್ರಾಮ ಪಂಚಾಯಿತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿರುವುದರಿಂದ, ಪುರಸಭೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸಲು ಅನುದಾನ ಬಿಡುಗಡೆ ಮಾಡಲು ಪುರಸಭೆ ಸ್ಥಳೀಯ ಖಜಾನೆಯಲ್ಲಿ ರೇವಣಿ ಖಾತೆಗಳನ್ನು ಹೊಂದಬೇಕಾಗಿರುತ್ತದೆ. ರೇವಣಿ ಖಾತೆಗಳನ್ನು ತೆರೆಯುವ ಪ್ರಕ್ರಿಯೆ ಕಾರ್ಯವು ಖಜಾನೆ ಜಾಲ ನಿರ್ವಹಣಾ ಕೇಂದ್ರದ (TNMC) ಹಂತದಲ್ಲಿದ್ದು, ಖಾತೆಗಳನ್ನು ತೆರೆದ ನಂತರ ಹುಣಸಮಾರನಹಳ್ಳಿ ಪುರಸಭೆ ವ್ಯಾಪ್ತಿಯ ಮೂಲಭೂತ ಸೌಕರ್ಯಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಹಂತಹಂತವಾಗಿ ಕಾಮಗಾರಿ/ಇನ್ನಿತರ ಮೂಲಭೂತ ಸೌಕರ್ಯಗಳನ್ನು ಕೈಗೊಳ್ಳಲಾಗುವುದು.
(ಈ)	ಹಾಗಿದ್ದಲ್ಲಿ, ಕಾಡಿಗಾನಹಳ್ಳಿ ಗ್ರಾಮದ ಬೃಂದಾವನ ಬಡಾವಣೆಗೆ ಯಾವ ಕಾಲಮಿತಿಯಲ್ಲಿ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಲಾಗುವುದು?	

ಸಂಖ್ಯೆ: ನಅಇ 27 ಎಲ್‌ಸಿಕ್ಯೂ 2021

(ಎನ್. ನಾಗರಾಜು ಎಂ.ಟಿ.ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ಯಮಗಳ ಸಚಿವರು.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೩ Part – III	ಬೆಂಗಳೂರು, ಶುಕ್ರವಾರ, ೨೬, ಮಾರ್ಚ್, ೨೦೨೧ (ಚೈತ್ರ, ೦೫, ಶಕವರ್ಷ, ೧೯೪೩) BENGALURU, FRIDAY, 26, MARCH, 2021 (CHAITHRA, 05, SHAKAVARSHA, 1943)	ನಂ. ೩೦೮ No. 308

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 154 ಎಂಎಲ್ಆರ್ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, **ದಿನಾಂಕ:26/03/2021.**

ಅಧಿಸೂಚನೆ

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 9 ಮತ್ತು 357 ರ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಹುಣಸಮಾರನಹಳ್ಳಿ ಮತ್ತು ಸೊಣ್ಣಪ್ಪನಹಳ್ಳಿ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು 'ಸಣ್ಣ ನಗರ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು 'ಹುಣಸಮಾರನಹಳ್ಳಿ ಪುರಸಭೆ' ಯ ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 154 ಎಂಎಲ್ಆರ್ 2020, ದಿನಾಂಕ 02/12/2020 ನ್ನು ದಿನಾಂಕ 02/12/2020 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:624 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆ ಸ್ವೀಕೃತವಾಗದಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 9 ಮತ್ತು 357 ರ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ'ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಹುಣಸಮಾರನಹಳ್ಳಿ ಮತ್ತು ಸೊಣ್ಣಪ್ಪನಹಳ್ಳಿ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು 'ಸಣ್ಣ ನಗರ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು 'ಹುಣಸಮಾರನಹಳ್ಳಿ ಪುರಸಭೆ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಇಪ್ಪತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಐವತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು; **24,359**

2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು; **2,276**
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂ.ಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು: **ರೂ.816.00 ಲಕ್ಷ**
4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು; **94%**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸಂಖ್ಯೆ:ನಅಇ 154 ಎಂಎಲ್ಆರ್ 2020

<u>ಶೆಡ್ಯೂಲ್ - ಎ</u>

ಜಿಲ್ಲೆ	**ತಾಲೂಕು**	**ಮೇಲ್ದರ್ಜೆಗೇರಿಸಿರುವ ಗ್ರಾಮ ಪಂಚಾಯಿತಿ**	**ಸೇರ್ಪಡೆಗೊಳಿಸಿರುವ ಗ್ರಾಮಗಳು**	**ಒಟ್ಟಾರೆ ಪ್ರದೇಶ**
ಬೆಂಗಳೂರು ನಗರ ಜಿಲ್ಲೆ	ಯಲಹಂಕ ತಾಲೂಕು	1. ಹುಣಸಮಾರನಹಳ್ಳಿ	1.ಹುಣಸಮಾರನಹಳ್ಳಿ ಹಾಗೂ ಮಜರೆ ಗ್ರಾಮಗಳು, ಭಾರತಿನಗರ ಮತ್ತು ಕೋಡಗಲಹಟ್ಟಿ.	10.70 ಚ.ಕಿ.ಮೀ
		2. ಸೊಣ್ಣಪ್ಪನಹಳ್ಳಿ	2.ಸೊಣ್ಣಪ್ಪನಹಳ್ಳಿ, ಕಾಡಿಗಾನಹಳ್ಳಿ, ಬಿಲ್ಲಮಾರನಹಳ್ಳಿ	

<u>ಷೆಡ್ಯೂಲ್ - ಬಿ</u>

<u>ಪೂರ್ವ:</u>	ಕಾಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 13 ರಿಂದ ಉತ್ತರದಿಂದ ದಕ್ಷಿಣಕ್ಕೆ ಪ್ರಾರಂಭವಾಗಿ ಚಿಕ್ಕಜಾಲ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಗಡಿಯಿಂದ ಪ್ರಾರಂಭವಾಗಿ ಕಾಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 14,18,19,20, ಹಾಗೂ 23 ರ ಮಧ್ಯದಲ್ಲಿ ಕಾಡಿಗಾನಹಳ್ಳಿ ಯಿಂದ ವಿದ್ಯಾನಗರಕ್ಕೆ ರಸ್ತೆಯನ್ನು ಒಳಗೊಂಡು ಮುಂದಕ್ಕೆ ಪಶ್ಚಿಮ ದಿಕ್ಕಿಗೆ ಸಾಗಿ ಎಡಕ್ಕೆ ತಿರುಗಿ ಚಿಕ್ಕಜಾಲ ಗಡಿಗೆ ಹೊಂದಿಕೊಂಡಂತೆ ಬಿಲ್ಲಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 46,47, 12, 14, 15 ,16ರ ನಂತರ ಬಲಕ್ಕೆ ತಿರುಗಿ ಉತ್ತರದಿಂದ ದಕ್ಷಿಣಕ್ಕೆ ಹೊಂದಿಕೊಂಡಂತೆ ಗಡಿ ರೇಖೆ ಇದ್ದು, ಬಲಕ್ಕೆ ತಿರುಗಿ ಹೊಸಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಬಿಲ್ಲಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 16,18,24,25,27, ನಂತರ ರಾಜ ಕಾಲುವೆ ಅಡ್ಡಬಂದು ಮುಂದು ವರೆದು ಹೊಸಹಳ್ಳಿ ಗಡಿಗೆ ಹೊಂದಿಕೊಂಡಂತೆ ಬಿಲ್ಲಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 28,29,31,32 ರಿಂದ ಹಾದು ಹುಣಸಮಾರನಹಳ್ಳಿ ಗ್ರಾಮದ ಸರ್ವೇ ನಂಬರ್: 134ರಿಂದ ಪೂರ್ವದಿಂದ ಪಶ್ಚಿಮವಾಗಿ ಹೊಸಹಳ್ಳಿ ಗ್ರಾಮದ ಗಡಿಯಿಂದ ಪ್ರಾರಂಭವಾಗಿ 133,132,131,109,107 ವರೆಗೆಯಿದ್ದು ಹೊಸಹಳ್ಳಿ ಹೊಗುವ ಮುಖ್ಯ ರಸ್ತೆಗೆ ಸೇರುತ್ತದೆ ಸರ್ವೆ ನಂ:107ರಿಂದ ಎಡಕ್ಕೆ ತಿರುಗಿ ಪುನಃ ಬಲಕ್ಕೆ ತಿರುಗಿ ರಾಜ ಕಾಲುವೆ ಪುರಂಭವಾಗಿ 97,96 ಈ ಸರ್ವೆ ನಂಬರ್ಗಳ ಪಕ್ಕದಿಂದ ರಾಜ ಕಾಲುವೆ ಹಾದುಹೋದ ನಂತರ ಹೊಸಹಳ್ಳಿಯಿಂದ ಸಾತನೂರು ಗ್ರಾಮಕ್ಕೆ ಹೋಗುವ ದಾರಿಗೆ ಅಂಟಿಕೊಂಡಂತೆ

	ಹುಣಸಮಾರನಹಳ್ಳಿ ಸರ್ವೆ ನಂಬರ್ ಸರ್ವೆ ನಂ:47,48,43,42,41,38ಮತ್ತು 37ರ ಸಾತನೂರು ಗ್ರಾಮದ ಸರಹದ್ದಿಗೆ ಅಂಟುಕೊಂಡು ಸಾತನೂರು ಗಡಿಯಲ್ಲಿ ಕೊನೆಗೊಳ್ಳುತ್ತದೆ.
ಪಶ್ಚಿಮ:	ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 184ರ ಹುಣಸಮಾರನಹಳ್ಳಿ ಕೆರೆಯಿಂದ ಹಾದು ಎಡಗಡೆಗೆ ವಾಲಿ ಸುಗ್ಗಟ್ಟ ಗ್ರಾಮದ ಗಡಿ ಪ್ರಾರಂಭವಾಗಿ ಮುಂದೆ 184ಅಂಟಿಕೊಂಡು ಸರ್ವೆ ನಂ: 182ರ ವರೆಗೆ ಗಡಿರೇಖೆಯಿದ್ದು ಸರ್ವೆ ನಂಬರ್:182ರ ನಂತರ ಸರ್ವೆ ನಂ:180ಮೂಲಕ ನೆಲ್ಲುಕುಂಟೆ ಗ್ರಾಮದ ಗಡಿ ಬಲಗಡೆಗೆ ವಾಲಿನೆಲ್ಲಿಕುಂಟೆ ಮತ್ತು ಬೆಟ್ಟಹಲಸೂರು ಗಡಿಯಿಂದ ಹೊಂದಿಕೊಂಡಂತೆ ದಕ್ಷಿಣದಿಂದ ಪೂರ್ವಕ್ಕೆ ಸೊಣ್ಣಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 34,19,20 ರ ಮಧ್ಯದಲ್ಲಿ ಬೆಟ್ಟಹಲಸೂರು ರಸ್ತೆಯನ್ನು ಬಳಸಿಕೊಂಡು 25,26,27,28 ನಂತರ ಸರ್ವೆ ನಂಬರ್ 29ರ ಸರ್ಕಾರಿ ಕೆರೆ ನಂತರ ಬೆಟ್ಟಹಲಸೂರು ಗಡಿಗೆ ಹೊಂದಿಕೊಂಡಂತೆ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಬಲಕ್ಕೆ ತಿರುಗಿ ಸೊಣ್ಣಪ್ಪನಹಳ್ಳಿ ಸರ್ವೆ ನಂಬರ್ 1 ರ ಸರ್ಕಾರಿ ಬೆಟ್ಟ ಬಳಸಿಕೊಂಡು ನಂತರ ಪಶ್ಚಿಮದಿಂದ ಪೂರ್ವಕ್ಕೆ ಎಡಕ್ಕೆ ತಿರುಗಿ ಬೆಟ್ಟಹಲಸೂರು ಗ್ರಾಮದ ಸರ್ವೆ ನಂಬರ್ 100 ರ ಸರ್ಕಾರಿ ಬೆಟ್ಟಕ್ಕೆ ಹೊಂದಿಕೊಂಡಂತೆ ಕಾಡಿಗಾನಹಳ್ಳಿ ಗ್ರಾಮದ ಸರ್ಕಾರಿ ಕೆರೆ ಸರ್ವೆ ನಂಬರ್ 33 ಮತ್ತು 34, 35, 46, 47, ರ ಚೊಕ್ಕನಹಳ್ಳಿ ಗ್ರಾಮದ ಗಡಿಯಲ್ಲಿ ಕೊನೆಗೊಳ್ಳುತ್ತದೆ.
ಉತ್ತರ:	ಬೆಟ್ಟಹಲಸೂರು ಹಾಗೂ ಚೊಕ್ಕನಹಳ್ಳಿ ಗಡಿ ಸಂದಿಸುವ ಜಾಗದಿಂದ ಪ್ರಾರಂಭವಾಗಿ ಚೊಕ್ಕನಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಪಶ್ಚಿಮದಿಂದ ಪೂರ್ವಕ್ಕೆ ಕಾಡಿಗಾನಹಳ್ಳಿ ಸರ್ವೆ ನಂಬರ್ 47, 48, 54, ನಂತರ ಮುಂದುವರೆದು ಚೆನ್ನಹಳ್ಳಿ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಕಾಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 54,57,58, ರ ನಂತರ ಬಲಕ್ಕೆ ತಿರುಗಿ ಚಿಕ್ಕಜಾಲ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಕಾಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 58,60,1,2,3, ನಂತರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯನ್ನು ಮುಂದುವರೆದು ಚಿಕ್ಕಜಾಲ ಗ್ರಾಮದ ಗಡಿಗೆ ಹೊಂದಿಕೊಂಡಂತೆ ಕಾಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 12,13, ಸೇರಿ ಚಿಕ್ಕಜಾಲ ಗಡಿಗೆ ಅಂತ್ಯಗೊಳ್ಳುತ್ತದೆ.
ದಕ್ಷಿಣ:	ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂ:37ರಿಂದ ಪ್ರಾರಂಭವಾಗಿ 36, 35, 34 ರಿಂದ ಹಾದು ಕಟ್ಟಿಗೇನಹಳ್ಳಿ ಗ್ರಾಮಕ್ಕೆ ಅಂಟಿಕೊಂಡಂತೆ ಎಡಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ-07ರ ವೆಂಕಟಾಲ ದಿಂದ ಬೆಂಗಳೂರು ರಸ್ತೆಯ ಬಲಗಡೆ ಸರ್ವೆ ನಂ:184ರ ಹುಣಸಮಾರನಹಳ್ಳಿ ಕೆರೆಯಿಂದ ಹಾದು ವಡೇರಪುರ ಗ್ರಾಮಕ್ಕೆ ಅಂಟಿಕೊಂಡಂತೆ ಹುಣಸಮಾರನಹಳ್ಳಿ ಗಡಿಯು ಕೊನೆಗೊಳ್ಳುತ್ತದೆ.

GOVERNMENT OF KARNATAKA

No.UDD 154 MLR 2020

Karanataka Government Secretariat
Vikasa Soudha,
Bangalore, **dated 26/03/2021.**

NOTIFICATION

Whereas the Notification of declaring the Grama Panchayat Area of Hunasamaranahalli including Sonnappanahalli Grama Panchayat of Jala Hobli, Yelahanka Taluk, Bengaluru Urban District as a Smaller Urban Area, mentioned in the Schedule "A" along with boundaries mentioned in Schedule "B" and further to specify as "Town Municipal Council Area" of Hunasamaranahalli was published as required by Section 3, 9 and 357 of the Karnataka Municipalities Act, 1964 in part-III, No.624, Karnataka Gazette Extraordinary, dated 02/12/2020 vide Government Notification No:UDD 154 MLR 2020, dated 02/12/2020 by providing thirty days' time and was published inviting objections/suggestions from all persons likely to be affected thereby on or before thirty days from the date of publication of the notification.

And whereas the Notification was made available to the public on the day of publication;

And whereas no objection/suggestion was received within the stipulated period;

Now, therefore, in exercise of the powers conferred by Section 3, 9 and 357 of the Karnataka Municipalities Act, 1964, the Hon'ble Governor, hereby notify the Grama Panchayat Area of Hunasamaranahalli including Sonnappanahalli Grama Panchayat of Jala Hobli, Yelahanka Taluk, Bengaluru Urban District as a Smaller Urban area mentioned in

Schedule-A along with boundaries mentioned in Schedule-B and further specifying such area to be the "Town Municipal Council Area" of Hunasamaranahalli having regard to:-

i. The population of such area is not less than twenty thousand and not more than fifty thousand; **24,359**
ii. The density of population in such area is not less than one thousand and five hundred inhabitants to one square kilometer of area; **2,276**
iii. The revenue generated for local administration from such area from tax and non-tax sources in the year of the last preceding census is not less than rupees nine lakhs per annum or a sum calculated at the rate of rupees forty five per capita per annum, whichever is higher; **Rs. 816.00 Lakhs**
iv. The percentage of employment in non-agricultural activities is not less than fifty per cent of the total employment; **94%**

By Order and in the name of the
Governor of Karnataka,

(A. VIJAYA KUMAR)
Under Secretary to Government,
Urban Development Department

File No. UDD 154 MLR 2020

SCHEDULE-A

District	Taluk	Grama Panchayat upgraded	Villages included	Total Area
Bangalore Urban	Yelahanka	Hunasamaranahalli Grama Panchayat	Hunasmaaranahalli & hamlet villages Bharathi nagar, Kodagalahatti	10.70 Sq.Km
		Sonnappanahalli Grama Panchayat	Sonnappanahalli, Kadiganahalli, Billamaranahalli	

SCHEDULE-B

East :	Starts from north east direction of kadiganahalli village sy no:13 crosing through joining towards the chikkajala border to kadiganahalli village survey no:14,18,19,20 & 23 and the middle of the kadiganahalli village including vidhya nagara road and forwarding to words west and turn to words left crossing the chikka jala borders, there joins the billamaranahalli village sy no:46,47;12,14,15,16th after turning towards right to north to south forwarding towards hosahalli village border there comes the billamaranahalli sy no:28,29,31,32 by sharing Hunasamaranahalli village with survey number 134 towords east to west starting from hosahalli village border and passing through survey no:133,132,131,109 and 107 till hosahalli village main road end. Moving from hosahalli main road and passing through sy no:107 and taking diversion to the left and slightly to the right to Starting point of Raja kaluve and joining the hosahalli and Sathanur village main road and joining the sy no:47, 48. 43. 42 41, 38 and 37sy no. where the Hunasamaranahalli village border ends with Sathanur village.
West :	Starts from north east direction of Hunasamaranahalli village with sy no:184 towords hunasamaranahalli lake sy no:84 joining sy no:182 and continuing sy no:182 and sy no:180 towords right the border of Nellukunte, bettahalasuru village border to the east sonnappanahalli village sy no starts sy no:34,19,20 in between that bettahalasuru road considering the sonnappanahalli sy no:25, 26, 27, 28 and sy no 29th government sonnappanahalli lake after the government lake sharing the borders with the bettahalasuru from east to west to the left turn sonnappanahalli sy no:1 government mountain after words from west to east to words left to bettahalasuru village sy no:100th government mountain surrounding kadiganahalli village government lake sy no:33 and 34, 35 46, 47th towards chokkanahalli village border sonnappanahalli village ends.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

North :	Starts from North of chokkanahalli village border to the east of kadiganahalli sy no:47, 48, 54 thereafter forwarding towards chennahalli village border and joining the kadiganahalli village sy no:54, 57, 58th after turning towords right kadiganahalli sy no:58, 60.1,2,3 and crossing the international airport road (National highway-07) and forwarding towards chikkajala border and there comes the kadiganahalli sy no:12,13 towards the Chikkajala border sonappanahalli gram panchayt border ends.
South :	Starts from South direction of Sathnur village Continuing towards Hunasamaranahalli village with survey number: 37 and passes through the sy no: 36, 35, 34 attached to the katigenahalli border towords left the National highway-07 from Venkatala towords Bangalore road towords right sy no:184 passing through the hunasamaranahalli lake and joining vaderapura village the Hunasamaranahalli and Sonnappanahalli border ends.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು